ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ನೆಲೆಸಿರುವ ನೈಜೀರಿಯನ್ ಪ್ರಜೆಗಳ ಕುರಿತು

ಶ್ರೀ ಹೆಚ್. ಎಂ. ರಮೇಶಗೌಡ(ವಿಧಾನಸಭೆಯಿಂದ ಚುನಾಯಿತರಾದವರು) -

528 (477) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಬೆಂಗಳೂರಿನಲ್ಲಿರುವ ನೈಜೀರಿಯನ್ ಪ್ರಜೆಗಳ ಸಂಪೂರ್ಣ ಮಾಹಿತಿ ಸರ್ಕಾರದ ಬಳಿ ಇದೆಯೇ; ಇವರಲ್ಲಿ ವೀಸಾ ಅವಧಿ ಮುಗಿದಿದ್ದರೂ ಇಲ್ಲೆ ವಾಸವಿರುವ ನೈಜೀರಿಯನ್ ಪ್ರಜೆಗಳು ಎಷ್ಟು;

(ಆ) ಈ ನೈಜೀರಿಯನ್ ಪ್ರಜೆಗಳು ಹಿಂದಿನಿಂದಲೂ ಡ್ರಗ್ಸ್ ದಂದೆಯಲ್ಲಿ ಸಕ್ರಿಯರಾಗಿದ್ದಾರೆನ್ನುವ ಆರೋಪ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದರೆ ಈವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

(ಇ) ಹೆಣ್ಣೂರು ಮತ್ತು ಬಾಣಸವಾಡಿ ಸುತ್ತಮುತ್ತ ಹೆಚ್ಚು ನೈಜೀರಿಯನ್ ಪ್ರಜೆಗಳು ವಾಸವಿದ್ದು, ಸ್ಥಳೀಯ ಯುವಕ ಯುವತಿಯವರನ್ನು ಡ್ರಗ್ಸ್ ವ್ಯಸನಕ್ಕೆ ಗುರಿಪಡಿಸುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಈ) ನೈಜೀರಿಯನ್ ಪ್ರಜೆಗಳ ಬಳಿ ಎಲ್.ಎಸ್.ಡಿ. ಕೊಕೇನ್, ಹೆರಾಯಿನ್, ಕೋಬ್ರಾ ಪಾಯ್ಸನ್ ನಂತಹ ಅತ್ಯಂತ ಭಯಾನಕ ಡ್ರಗ್ಸ್‌ಗಳಿವೆ ಎನ್ನುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಡ್ರಗ್ಸ್ ಹೇಗೆ ನೈಜೀರಿಯನ್ ಪ್ರಜೆಗಳನ್ನು ತಲುಪುತ್ತಿದೆ; ಇವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?